# ಸ್ವಾಮಿ ನಿರ್ವಾಣಾನಂದ (೧೮೯೦-೧೯೮೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

'ಸೂರ್ಯ ಮಹಾರಾಜ್' ಎಂದೇ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳ ವಲಯದಲ್ಲಿ ಪ್ರಸಿದ್ಧರಾಗಿದ್ದ ಸ್ವಾಮಿ ನಿರ್ವಾಣಾನಂದರು ಸ್ವಾಮಿ ಬ್ರಹ್ಮಾನಂದರ ಸೇವಕರಾಗಿದ್ದರು. ಮುಂದೆ ಸಂಘದ ಉಪಾಧ್ಯಕ್ಷರೂ ಆದ ಅವರು ಆಧ್ಯಾತ್ಮಿಕ ಔನ್ನತ್ಯವನ್ನು ಏರಿದವರು; ಹಲವು ಮಂದಿ ಸಂನ್ಯಾಸಿಗಳಿಗೆ ಪ್ರೇರಕಶಕ್ತಿಯಾದರು. ಅವರನ್ನು ಕುರಿತ ಕೆಲವು ಸ್ಮೃತಿಚಿತ್ರಗಳು ಇಲ್ಲಿವೆ.

೧೯೬೪-೬೫ ನೇ ಇಸವಿಯಲ್ಲಿ ನಾನು ಟ್ರೇನಿಂಗ್ ಸೆಂಟರಿನಲ್ಲಿದ್ದಾಗ, ಸಂಜೆ ಠಾಕೂರರ ನೈವೇದ್ಯದ ಗಂಟೆ ಹೊಡೆದಾಗ ನಾವು ಸ್ವಾಮಿ ನಿರ್ವಾಣಾನಂದರ ಕೋಣೆಗೆ ಹೋದರೆ, ನೈವೇದ್ಯ ಮುಗಿದು ಗಂಟೆ ಬಾರಿಸುವ ತನಕ ಅವರು ಠಾಕೂರರ ಶಿಷ್ಯರ ಬಗ್ಗೆ ಮಾತನಾಡುತ್ತಿದ್ದರು. ಅದ್ಭುತ ದಿನಗಳವು. ಈ ಹಿರಿಯ ಸಾಧುಗಳೆಲ್ಲ ಠಾಕೂರರ ಶಿಷ್ಯರ ಜತೆ ಒಡನಾಡಿ ಅವರ ದಿವ್ಯ ಜೀವನವನ್ನು ಕಂಡವರು. ಠಾಕೂರರು ಅವರಿಗೆ ಯಾವ ರೀತಿ ಶಿಕ್ಷಣವನ್ನು ನೀಡುತ್ತಿದ್ದರೆಂದು ಅವರಿಂದ ಕೇಳಿ ತಿಳಿದಿದ್ದರು. ಈ ವಿಷಯಗಳೆಲ್ಲ ಪುಸ್ತಕಗಳಲ್ಲಿಲ್ಲ. ಈ ಮೌಖಿಕ ಪರಂಪರೆಯನ್ನು ನಾವೀಗ ಸಾಕಷ್ಟು ಕಳೆದುಕೊಂಡಿದ್ದೇವೆ.

ಒಂದು ಸಂಜೆ ಸೂರ್ಯ ಮಹಾರಾಜರು ಹೇಳಿದರು, ''ಹರಿ ಮಹಾರಾಜರಿಗೆ (ಸ್ವಾಮಿ ತುರೀಯಾನಂದ) ನಾನು ಹೇಳಿದೆ, ಮಹಾರಾಜ್, ಮನೆ-ಗಿನೆ, ತಂದೆ-ತಾಯಿ, ಎಲ್ಲ ವನ್ನೂ ಬಿಟ್ಟು ಬಂದದ್ದಾಯಿತು. ಆದರೆ ಭಗವದ್ದರ್ಶನ ಇನ್ನೂ ಆಗಿಲ್ಲವಲ್ಲ! ಹರಿ ಮಹಾರಾಜರು ಉತ್ತರಿಸಿದರು : 'ನೋಡು, ಠಾಕೂರರು ಕಲ್ಪತರು. ನಾವು ಕಲ್ಪವೃಕ್ಷದ ಅಡಿಯಲ್ಲಿದ್ದೇವೆ. ಈ ವೃಕ್ಷದಲ್ಲಿ ಹಣ್ಣುಗಳು ನೇತಾಡುತ್ತಿವೆ. ಈ ವೃಕ್ಷದ ಕೆಳಗಿದ್ದರೆ ಒಂದಲ್ಲ ಒಂದು ದಿನ ಹಣ್ಣು ಸಿಗುತ್ತದೆ. ಆದರೆ ಫಲವು ಈಗಲೆ ಬೇಕಾದರೆ Shake the tree, shake the tree — ಮರವನ್ನು ಚೆನ್ನಾಗಿ ಅಲುಗಾಡಿಸು. ಆಗ ಶೀಘ್ರವಾಗಿ ಫಲವನ್ನು ಪಡೆಯಬಹುದು. ಅಲುಗಾಡಿಸುವುದು ಎಂದರೆ ತೀವ್ರ ಪುರುಷಕಾರ.'' ಇದು ನನ್ನ ಮನಸ್ಸಿನ ಮೇಲೆ ಅತ್ಯಂತ ಪ್ರಭಾವ ಬೀರಿತು.

ಮತ್ತೊಂದು ದಿನ ಸೂರ್ಯ ಮಹಾರಾಜರು ಹೇಳಿದರು, ''ಶರತ್ ಮಹಾರಾಜರನ್ನು ಒಂದು ದಿನ ಕೇಳಿದ್ದೇವೆ, 'ಮಹಾರಾಜ್, ಠಾಕೂರರು ತೋತಾಪುರಿಯಿಂದ ಸಂನ್ಯಾಸವನ್ನು ಪಡೆದಾಗ ಸಂನ್ಯಾಸ ಮಂತ್ರವನ್ನು ಉಚ್ಚರಿಸಿದ್ದರೆಂದು ನೀವು 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಬರೆದಿರುವಿರಿ. ಮಂತ್ರೋಚ್ಚಾರಣೆಯನ್ನು ಅವರು ಮಾಡಿದ್ದರೆಂದು ಠಾಕೂರರು ನಿಮಗೆ ಹೇಳಿದ್ದರೇನು?'' ಇದಕ್ಕುತ್ತರವಾಗಿ ಶರತ್ ಮಹಾರಾಜರೆಂದರು, ''ಇಲ್ಲ, ಠಾಕೂರರು ಮಂತ್ರವನ್ನು ನಮಗೆ ಹೇಳಲಿಲ್ಲ. ಆದರೆ ತೋತಾಪುರಿಯವರಿಂದ ಅವರು ದಶನಾಮಿ ಸಂಪ್ರದಾಯದ ಆನುಷ್ಠಾನಿಕ ಸಂನ್ಯಾಸವನ್ನು ಪಡೆದಿದ್ದರೆಂದು ಹೇಳಿದ್ದರು. ಆನುಷ್ಠಾನಿಕ ಸಂನ್ಯಾಸವನ್ನು ಪಡೆದಿದ್ದರೆ, ನಿಶ್ಚಯವಾಗಿಯೂ ಮಂತ್ರೋಚ್ಚಾರಣೆಯನ್ನು ಮಾಡಿರಲೇಬೇಕು.''

ಸ್ವಾಮಿ ನಿರ್ವಾಣಾನಂದರು ಠಾಕೂರರ ಶಿಷ್ಯರ ಅನೇಕ ಘಟನೆ ಹಾಗೂ ಕಥೆಗಳನ್ನು ನಮಗೆ ಹೇಳಿದ್ದರು. ಅವುಗಳನ್ನು ಅನೇಕ ಪುಸ್ತಕಗಳಲ್ಲಿ ಪ್ರಕಟಿಸಲಾಗಿದೆ. ಸ್ವಾಮಿ ಬ್ರಹ್ಮಾನಂದರ ಬಗ್ಗೆ ಹೇಳುವಾಗ ಅವರು ಆದರಲ್ಲಿ ತಲ್ಲೀನರಾಗಿಬಿಡುತ್ತಿದ್ದರು. ಅವರ ಗುರುಭಕ್ತಿಗೆ ಎಲ್ಲೆಯಿರಲಿಲ್ಲ. ಅಂತೆಯೇ ಅವರ ಕಾರ್ಯದಕ್ಷತೆಯೂ ಅಸೀಮವಾದುದು. ಅಲ್ಪ ವಯಸ್ಸಿನಲ್ಲೇ ಅವರು ಮಠ-ಮಿಶನ್ನಿನ ಟ್ರಸ್ಟಿಗಳಾಗಿದ್ದರು.



ಸ್ವಾಮಿ ನಿರ್ವಾಣಾನಂದರು ಭುವನೇಶ್ವರದಲ್ಲಿದ್ದಾಗ ಅವರ ಆಶೀರ್ವಾದವನ್ನು ಕೋರುತ್ತ ಪತ್ರವನ್ನು ಬರೆದಾಗ ಅವರು ೧೩. ೧೨.೧೯೭೧ರಂದು ಉತ್ತರಿಸಿದರು: ''ನೀನು ನಿಜವಾಗಿಯೂ ನಿನ್ನ ಸಮಸ್ಯೆಗಳನ್ನು ಹೇಳಿದ್ದೆ, ಆದರೆ ನಿನಗೆ ವಿದೇಶಕ್ಕೆ ಹೋಗಲು ಯಾವುದೇ ತೊಂದರೆಯುಂಟಾಗುವುದೆಂದು ನನಗನ್ನಿಸುವುದಿಲ್ಲ. ನೀನೆಂದೂ ಇಂಗ್ಲಿಷಿನಲ್ಲಿ ಭಾಷಣ ಮಾಡಿಲ್ಲವೆಂಬುದು ಅಲ್ಲಿಗೆ ಹೋಗಲು ಯಾವ ಅಡ್ಡಿಯನ್ನೂ ಉಂಟುಮಾಡಲಾರದು. ಭಾಷಣ ಮಾಡುವುದೇ ಸಾಧು ಜೀವನದ ಸರ್ವಸ್ವ ಅಥವಾ ಪ್ರಚಾರ ಮಾಡುವ ಏಕಮಾತ್ರ ಉಪಾಯವಲ್ಲ. ಸ್ವಾಮೀಜಿ ಹೊರತು ಉಳಿದವರೆಲ್ಲರ ಭಾಷಣವೂ ಸಪ್ಪೆಯೇ. Swamiji was an orator by divine right. ಇಂತಹ ವ್ಯಕ್ತಿಯಲ್ಲದೆ ಬೇರಾರೂ ಬರಿಯ ಭಾಷಣದಿಂದ ಯಾರ ಚೇತನವನ್ನೂ ಜಾಗೃತಗೊಳಿಸಲಾರರು. ಭಾಷಣದಲ್ಲಿ ಭಾಷಣಕಾರರ ಆಧ್ಯಾತ್ಮಿಕ ಶಕ್ತಿ ಪ್ರಕಾಶಿಸಬೇಕು. ಸಾಧುವಿನ ಜೀವನವು ತ್ಯಾಗ-ತಪಸ್ಸು ಹಾಗೂ ಸಾಧನೆ-ಭಜನೆಯ ಮೇಲೆ ಪ್ರತಿಷ್ಠಿತವಾಗಿರಬೇಕು. ಇಂಥ ಜೀವನದ ಸಂಸ್ಪರ್ಶಕ್ಕೆ ಬಂದಾಗ ಮಾತ್ರವೇ ಜನರ ಮನಸಿನಲ್ಲಿ ಧರ್ಮದ ಪ್ರೇರಣೆ ಯಾಗುವುದು. ಇಂತಹ ವ್ಯಕ್ತಿಯ ಭಾಷಣವು ಹೇಗೆಯೇ ಇರಲಿ, ಅವರ ಆಂತರ್ಯವು ಶ್ರೋತೃಗಳ ಹೃದಯವನ್ನು ಸ್ಪರ್ಶಿಸುತ್ತದೆ.''

ಒಂದು ದಿನ ರಾತ್ರಿಯ ಕ್ಲಾಸಿನಲ್ಲಿ ನಮಗೆ ಹೇಳಿದ್ದರು: ''ನೋಡಿ, ಠಾಕೂರರು ಅತೀವ ಕರುಣಾಮಯರು. ಒಂದು, ಎರಡು, ನೂರು, ಸಾವಿರ ಸಲ ನಮ್ಮನ್ನು ಅವರು ಕ್ಷಮಿಸುವರು. ಆದರೆ ಒಂದು ಸಲ ಮುಖ ತಿರುಗಿಸಿದರೆಂದರೆ ಮೂರು ಲೋಕದಲ್ಲೆಲ್ಲೂ ನಮಗೆ ಸ್ಥಾನವಿಲ್ಲ. ಒಬ್ಬನು ನಿಷ್ಠಾಪೂರ್ವಕವಾಗಿ ಠಾಕೂರರನ್ನು ಪ್ರಾರ್ಥಿಸಿದರೂ ಈ ಸಂಘವು ಸರಿಯಾಗಿ ನಡೆಯುತ್ತದೆ.'' ,